

ಬಂದಿದ್ದರೆ ನನ್ನ ಪಾಠಗಳ ಸಂಶಯಗಳನ್ನೂ ನಿವಾರಿಸುತ್ತಿದ್ದ – ಮುಖ್ಯವಾಗಿ ನನಗೆ ದುಃಸ್ವಪ್ನವಾಗಿ ಕಾಡುತ್ತಿದ್ದ ಲೆಕ್ಕ ಮತ್ತು ವಿಜ್ಞಾನ; ಮೂವತ್ತು ಪ್ಲಸ್ ಗ್ರೇಸ್‌ನ ವರ್ತುಲದೊಳಗಿದ್ದ ಆ ವಿಷಯಗಳು ಐವತ್ತರ ಸಮೀಪ ಬಂದು, 'ಶುದ್ಧ ಅಪ್ರಯೋಜಕ' ಎಂಬ ಬಿರುದಿನಿಂದ, 'ಪರವಾಗಿಲ್ಲ, ಪಾಸಿಗೆ ಮೋಸವಿಲ್ಲ' ಎಂಬಲ್ಲಿಗೆ ಸೇರುವಾಗ ಅರ್ಧ ವಾರ್ಷಿಕ ಪರೀಕ್ಷೆಗಳು ಮುಗಿದಿದ್ದವು.

ಆ ರಜೆಯಲ್ಲೇ ಅಲ್ಲವೇ ಘಟಿಸಿದ್ದು?

ಗೆಳೆಯರೆಲ್ಲ ಸಿನಿಮಾ ನೋಡಲು ಟೌನಿಗೆ ಹೋದಾಗ ಕಣ್ಣಿಗೆ ಬಿದ್ದದ್ದು ಬಸ್ ಸ್ಟಾಪಿನಲ್ಲಿ ಕಲ್ಯಾಣಿ ಜೊತೆ ಒಬ್ಬ ಹುಡುಗಿ, ಅದು ಬೇರಾರು





ಅಲ್ಲ ಗೆಳೆಯ ಶೇಖರನ ಅಕ್ಕ ವಸಂತ. ನಾವು ಅವಳನ್ನು ವಸಂತಕ್ಕ ಎಂದೇ ಕರೆಯುತ್ತಿದ್ದೆವು. ಟಿ.ಸಿಎಚ್ ಮಾಡಿ ನಮ್ಮ ಶಾಲೆಯಲ್ಲಿ ಪ್ರೈಮರಿ ವಿಭಾಗಕ್ಕೆ ಸೇರಿ ಒಂದು ವರ್ಷವಾಗಿತ್ತು. ನನ್ನನ್ನು ಕಂಡೊಡನೆ ಯಾವ ಹಿಂಜರಿಕೆಯೂ ಇಲ್ಲದೆ ಇಬ್ಬರೂ ಮಾತನಾಡಿಸಿದ್ದರು. ನಾನು ಏನೋ ಘನಂದಾರಿ ಕೆಲಸವೆನ್ನುವಂತೆ ವಿಷಯವನ್ನು ಶೇಖರನಿಗೆ ತಿಳಿಸಿದ್ದೆ. ಅಲ್ಲಿಂದ ವಿಚಾರಣೆ ಶುರು. ಅದು ನನ್ನ ಹಾಜರಿಯಲ್ಲೇ. ಅಂದಿನ ಕಾಲಕ್ಕೆ ಅದೊಂದು ಘೋರ ಅಪರಾಧ. 'ಆಕಸ್ಮಿಕವಾಗಷ್ಟೇ ಕಲ್ಯಾಣ್ ಬಸ್ ಸ್ಟಾಪಿಗೆ ಬಂದಿದ್ದು' ಎಂದು ವಸಂತ ಎಷ್ಟೇ ಅವಲತ್ತುಕೊಂಡರೂ ಕೇಳಿರಲಿಲ್ಲ. 'ಊಟಕ್ಕೆ ಗತಿಯಿಲ್ಲ, ಇನ್ನು ಅವನಿಗೆ ಶೋಕಿ ಬೇರೆ. ಅಯ್ಯೋ ಪಾಪ ಅಂತ ದಾರಿ ತೋರಿದರೆ ಹೀಗೆ ದ್ರೋಹ ಬಗೆಯುವುದಾ? ಉಂಡ ಮನೆಗೇ? ಇನ್ನು ಯಾವ ವಾರನ್ನವೂ ಬೇಡ, ಸಾಕು ಇವಳನ್ನು ದಡಸೇರಿಸಿ ಕೈ ತೊಳ್ಕೊಳ್ಳೋಣ' ಎನ್ನುವ ವರೆಗೆ ಮನೆಯವರ ಅದರಲ್ಲೂ ಶೇಖರನ ಅಮ್ಮನ ಸ್ವರ ತಾರಕಕ್ಕೇರಿತ್ತು. ವಸಂತ ಕಣ್ಣೀರಿಡುತ್ತಲೇ ನನ್ನತ್ತ ಗುರಾಯಿಸಿದಳು,